## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS-233 /2003** **PW-1**

**ದಿಃ 06.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 13 ನೇ ಪ್ರತಿವಾದಿ ಪರ ಶ್ರೀಮತಿ ಜೆ ಪಿ ಡಿ ವಕೀಲರಿಂದಃ**

ನನಗೆ ಈಗ 67 ರಿಂದ 68 ವರ್ಷ ವಯಸ್ಸಾಗಿರುತ್ತದೆ. ನಾನು ನೀಡಿದ ಮಾಹಿತಿಯಂತೆಯೇ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲಾಗಿರುತ್ತದೆ. ನನಗೆ ಇಂಗ್ಲೀಷ ಬರುವದಿಲ್ಲ, ಕನ್ನಡದಲ್ಲಿ ತಿಳಿದುಕೊಂಡು ಮಾಹಿತಿ ಕೊಟ್ಟಿರುತ್ತೇನೆ. ನನಗೆ ಈ ಕೇಸನ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನಗೆ ಈ ದಾವೆಯನ್ನು ಯಾವ ವರ್ಷದಲ್ಲಿ ಹಾಕಿರುತ್ತಾರೆಂಬ ಬಗ್ಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ನನ್ನ ಅಣ್ಣ ಆಗಿರುತ್ತಾರೆ. ಅವರು ವಕೀಲರಾಗಿದ್ದರು ಎಂದರೆ ಸರಿ. ತಾವೆಲ್ಲರೂ ಅವರಿಗೆ ಒಟ್ಟುಮೊಕ್ತಿಯಾರ ಪತ್ರವನ್ನು ನೀಡಿ ಅವರು ಹೇಳಿದಂತೆ ತಾವು ಕೇಳುತ್ತಿದ್ದೀರಿ ಎಂದರೇ ಸಾಕ್ಷಿಯು ಎಲ್ಲರೂ ಅವರು ಹೇಳಿದಂತೆ ಕೇಳಿದ್ದೇವೆಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ವಕೀಲರನ್ನು ನೇಮಕ ಮಾಡಿಕೊಂಡಿಲ್ಲ ಬದಲಿಗೆ 1 ನೇ ಪ್ರತಿವಾದಿಯೇ ವಕಾಲತ್ತನ್ನು ನೀಡಿ ನೇಮಕ ಮಾಡಿರುತ್ತಾರೆ. ನನಗೆ ಈ ಪ್ರಕರಣದಲ್ಲಿ ಯಾವ ರೀತಿಯ ತಕರಾರನ್ನು ಹಾಕಲಾಗಿದೇ ಎಂಬ ಬಗ್ಗೆ ಮಾಹಿತಿ ಇಲ್ಲ. ತಮಗೆ ತಾವು ಸಲ್ಲಿಸಿರುವ ಕೈಪಿಯತ್ತನ ಪ್ರಕಾರ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಕಬೇಕೆಂಬ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಅಣ್ಣ ತಮ್ಮಂದಿರೆಲ್ಲರೂ ಸೇರಿ ವಿಚಾರ ಮಾಡಿ ಸಲ್ಲಿಸಿರುತ್ತೇವೆ ಎನ್ನುತ್ತಾರೆ. ನನಗೆ ದಾವಾ ಆಸ್ತಿಯ ಸಂಪೂರ್ಣ ವಿವರಣೆ ಹೇಳಲು ಬರುವದಿಲ್ಲ ಕಾರಣ ಅದು ಪ್ಲಾಟು ಆಗಿದ್ದು ತುಂಬಾ ದಿವಸಗಳಾಗಿರುತ್ತವೆ ಎನ್ನುತ್ತಾರೆ. ಯಾವ ವರ್ಷದಲ್ಲಿ ಪ್ಲಾಟುಗಳಾಗಿವೆ ಎಂಬ ಬಗ್ಗೆ ಮಾಹಿತಿ ಇಲ್ಲ. ನನಗೆ 1 ನೇ ಪ್ರತಿವಾದಿಯು ಇದ್ದಾಗಿಂದಲೇ ಶ್ರೀ ಚಿದಾನಂದ ರಟ್ಟಿಹಳ್ಳಿ ವಕೀಲರು ಪರಿಚಯ ಇರುತ್ತಾರೆ. 1 ನೇ ಪ್ರತಿವಾದಿಯು ಯಾವ ರೀತಿ ತಕರಾರು ಹಾಕಿರುತ್ತಾರೆಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ ಕಾರಣ 1 ನೇ ಪ್ರತಿವಾದಿಯು ನಮಗೆ ಯಾವದೇ ರೀತಿಯ ಮಾಹಿತಿ ನೀಡುತ್ತಿರಲಿಲ್ಲ. ತಾವು ತಮ್ಮ ಪ್ರಮಾಣ ಪತ್ರದಲ್ಲಿ ಶೇತ್ಕಿ ಜಮೀನು ವ್ಯವಸಾಯ ಮಾಡುತ್ತಿದ್ದೀರಿ ಎಂದು ಬರೆಸಿರುವದು ಸುಳ್ಳಿನಿಂದ ಕೂಡಿರುತ್ತದೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ವರ್ಷ ಮಳೆಯಾಗದ ಕಾರಣ ಯಾವದೇ ಬೆಳೆ ಬೆಳದಿಲ್ಲ.

ಸಾಕ್ಷಿಯು ಈ ವರ್ಷ ಬೆಳೆಯುತ್ತಿದ್ದ್ಮೇವೆಂದು ನುಡಿಯುತ್ತಾರೆ. ಈಗಲೂ ಸಹ ದಾವಾ ಆಸ್ತಿಯ ಶೇತ್ಕಿ ಜಮೀನು ಆಗಿ ಉಳಿದಿದೇ ಎಂದು ತೋರಿಸಲು ಯಾವದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಬೆಳೆದ ಬೆಳೆಯನ್ನು ಖಠಾವು ಮಾಡಿ ಮಾರಾಟ ಮಾಡಿದ ಬಗ್ಗೆ ಯಾವದೇ ರಶೀದಿ ಹಾಜರುಪಡಿಸಿಲ್ಲ. ಜಮೀನಿನ ಕರ ತುಂಬಿದ ಬಗ್ಗೆ ದಾಖಲೆ ಕೊಟ್ಟಿಲ್ಲ ಬೇಕಾದಲ್ಲಿ ಒದಗಿಸುತ್ತೇನೆ. ಶೇತ್ಕಿ ಜಮೀನಿನ ಬಗ್ಗೆ ಬರ ಪರಿಹಾರ ಪಡೆದ ಬಗ್ಗೆ ಯಾವದೇ ದಾಖಲೆಗಳು ಇರುವುದಿಲ್ಲ. ತಾವು ಯಾವದೇ ಶೇತ್ಕಿ ಜಮೀನು ಇರದಿದ್ದರೂ ಈಗ ಉದ್ದೇಶಪೂರ್ವಕವಾಗಿ ವ್ಯವಸಾಯ ಮಾಡುತ್ತಿದ್ದೇನೆಂದು ಹೇಳಿ  ಸುಳ್ಳು ಹೇಳುತ್ತಿದ್ದೇನೆಂದರ ಸರಿಯಲ್ಲ. 1 ನೇ ಪ್ರತಿವಾದಿಯು ತಮ್ಮ ಮೇಲೆ ಗೂಂಡಾಗಿರಿ ಮಾಡಿ ಅಥವಾ ಒತ್ತಾಯ ಮಾಡಿ ಕೆಲವೊಂದು ದಾಖಲೆಗಳ ಮೇಲೆ ಸಹಿ ಪಡೆದಿರುತ್ತಾರೆಂದು ಹೇಳಿದ್ದು ಈ ಬಗ್ಗೆ ಏನಾದರೂ ದೂರನ್ನು ದಾಖಲಿಸಿರುತ್ತೀರಾ ಎಂದರೆ ಸಾಕ್ಷಿಯು ಅವರ ಮೇಲೆ ದೂರು ದಾಖಲಿಸಿಲ್ಲ ಎಂದು 1 ನೇ ಪ್ರತಿವಾದಿಯು ಹೇಳಿದ ಕಡೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ.

2. 1987 ರಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಅದ್ಯಾಪಕ ಸೊಸೈಟಿಯವರ ದಾವೆಯು ಇತ್ತು ಎಂದರೆ ಸಾಕ್ಷಿಯು ನನ್ನ ಅಣ್ಣನಿಗೆ ಗೊತ್ತು ಎನ್ನುತ್ತಾರೆ. ಆ ದಾವೆಯಲ್ಲಿ ತಡೆಯಾಜ್ಞೆಯು ಸಹ ಜಾರಿಯಲ್ಲಿತ್ತು ಎಂದರೇ ಗೊತ್ತಿಲ್ಲ. ಆ ದಾವೆಯು 1999 ರಲ್ಲಿ ತಮ್ಮ ಪರವಾಗಿ ತೀರ್ಮಾನವಾಗಿರುತ್ತದೆಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ತಾವೆಲ್ಲರೂ ಸೇರಿ ಚಿದಾನಂದ ರಟ್ಟಿಹಳ್ಳಿ ವಕೀಲರಿಗೆ 1997 ರಲ್ಲಿ ನೋಂದಾಯಿತ ಒಟ್ಟುಮೊಕ್ತಿಯಾರ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾವು ಯಾವದೇ ದಾಖಲೆಗಳನ್ನು ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. 2000 ನೇ ಇಸ್ವಿಯಲ್ಲಿ ಸದರಿ ಮೊಕ್ತಿಯಾರ ಪತ್ರದ ಆದಾರದ ಮೇಲೆ 10 ರಿಂದ 13 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿರುತ್ತದೆಂದರೇ ಸಾಕ್ಷಿಯು ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. ನಂತರ 2002 ನೇ ಇಸ್ವಿಯವರೆಗೆ ಖರೀದಿದಾರರು ಖರೀದಿ ಮಾಡಿದ ಜಮೀನನ್ನು ಪ್ಲಾಟುಗಳಾಗಿ ಪರಿವರ್ತಿಸಿ ಭಾಗ ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿಯು ಯಾವದೇ ರೀತಿಯ ಪ್ಲಾಟು ಆಗಿಲ್ಲ ಬೋರವೆಲ್ಲ ಆಗಿಲ್ಲ, ಕಲ್ಲುಗಳು ಇಲ್ಲ ಎಂದು ನುಡಿಯುತ್ತಾರೆ. ನಾನು ಯಾವದೇ ರೀತಿಯ ದಾವಾ ಆಸ್ತಿಗೆ

ಸಂಬಂದಿಸಿದ ದಾಖಲೆಗಳನ್ನು ನೋಡಿರುವದಿಲ್ಲ, ತೆಗೆದು ನೋಡಬೇಕಾಗುತ್ತದೆ. ಈ ದಾವೆಯನ್ನು ವಾದಿಯರು ಯಾವ ಕಾರಣಕ್ಕಾಗಿ ನಮ್ಮ ಮೇಲೆ ಮತ್ತು ಇತರರ ಮೇಲೆ ಹಾಕಿರುತ್ತಾರೆಂಬ ಬಗ್ಗೆ ಯಾವದೇ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯು ಸುಮಾರು 7 ರಿಂದ 8 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿದ ನಂತರ ನಾನು ಈ ದಾವೆಯನ್ನು ಯಾವ ಕಾರಣಕ್ಕಾಗಿ ಹಾಕಿರುತ್ತಾರೆಂಬ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಡಲಿಲ್ಲ ಸಾಕ್ಷಿ ಮುಂದುವರೆದು ಅವರಿಗೆ ಕೊಟ್ಟಿದ್ದು ಮತ್ತು ಪಡೆದಿದ್ದು ಗೊತ್ತಿಲ್ಲ ನಾವೇ ಕಬಜಾದಲ್ಲಿ ಇರುತ್ತೇವೆ ಎನ್ನುತ್ತಾರೆ. 1 ನೇ ಪ್ರತಿವಾದಿಯು ಸಲ್ಲಿಸಿದ ಕೈಪಿಯತ್ತನ 6 ನೇ ಪ್ಯಾರಾದಲ್ಲಿ ಮಾರಾಟದ ಬಗ್ಗೆ ಒಪ್ಪಿರುತ್ತಾರೆಂದರೆ ಸಾಕ್ಷಿಯು ನನಗೆ ಯಾವದೇ ರೀತಿಯ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ತಾವು 13 ನೇ ಪ್ಯಾರಾದಲ್ಲಿ ನೋಂದಾಯಿತ ದಾಖಲೆ ಮುಖಾಂತರ ಮಾರಾಟ ಮಾಡಿರುತ್ತೀರಿ ಎಂದು ಸಹ ಒಪ್ಪಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಯಾವದೇ ರೀತಿಯ ಮಾಹಿತಿ ಇಲ್ಲ ಎನ್ನುತ್ತಾರೆ. ದಾವೆಯಲ್ಲಿ ನೀಡಿದಂತಹ ನೋಟಿಸುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ನನ್ನ ತಮ್ಮನನ್ನು ಕೇಳಿ ಹೇಳಬೇಕಾಗುತ್ತದೆ. ನಾವು ಖರೀದಿ ಪತ್ರವು ನಮಗೆ ಬಾಂದಾಯಿಸುವುದಿಲ್ಲ ಎಂದು ಹೇಳಿ ಯಾವದೇ ಕೌಂಟರ ಕ್ಲೇಮನ್ನು ಹಾಕಿಲ್ಲ ಸಾಕ್ಷಿ ಮುಂದುವರೆದು ಇಲ್ಲಿಯವರೆಗೂ ನನಗೆ ದಾವೆ ಹಾಕಿರುವ ವಿಚಾರವೇ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ತಾವು ಕೇಸನ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿದ ನಂತರವೇ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸಬೇಕಾಗುತ್ತದೆಂದರೆ ಸರಿ. ತಾವು ಸುಳ್ಳು ಪ್ರಮಾಣ ಪತ್ರವನ್ನು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ ಆಸ್ತಿಗೇ ಸಂಬಂದಿಸಿದಂತೆ ಸಾಕ್ಷಿ ನುಡಿಯುತ್ತಿದ್ದೇವೆ ಎನ್ನುತ್ತಾರೆ. ತಮಗೆ ಈ ದಾವೆಯ ಬಗ್ಗೆ ಯಾವದೇ ರೀತಿಯ ಮಾಹಿತಿ ಇರದಿದ್ದರೂ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಈಗಾಗಲೇ 1 ನೇ ಪ್ರತಿವಾದಿಗೆ ಒಟ್ಟುಮೊಕ್ತಿಯಾರ ಪತ್ರವನ್ನು ಕೊಟ್ಟ ಕಾರಣ ಅವರು ಸಲ್ಲಿಸಿರುವ ಕೈಪಿಯತ್ತನ ವಿಚಾರವು ತಮ್ಮನ್ನು ಬಾಂದಾಯಿಸುತ್ತದೆಂದರೆ ಸರಿಯಲ್ಲ.

ಈ ಸಂದರ್ಬದಲ್ಲಿ 13 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲನ್ನು ವಾದಿ ಪರ ವಕೀಲರು ಪಾಟೀ ಸವಾಲು ಮಾಡಿದ ನಂತರ ಮುಂದುವರೆಸುವದಾಗಿ ತಿಳಿಸಿದ್ದು ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.